ಅಧ್ಯಕ್ಷರು ಅವಕಾಶ ಮಾಡಿಕೊಡುತ್ತೇನೆ ಈಗ ಶ್ರೀ ಹೆಚ್ ಹಾಲಪ್ಪನವರ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಮಾಹಿತಿಗಳು ಸರಿಯಾಗಿಲ್ಲವೆಂದು ಒಂದು ವಾರ ಸಮಯ ಕೇಳಿದ್ದಾರೆ ಮುಂದಿನ ವಾರ ಅವಕಾಶ ಮಾಡಿಕೊಡುತ್ತೇನೆ

ಈರುಳ್ಳಿ ಖರೀದಿಯಲ್ಲಿ ಅವ್ಯವಹಾರ

133 (1135) – ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಈರುಳ್ಳಿ ಖರೀದಿಗೆ ಸರ್ಕಾರ ಬಿಡುಗಡೆ ಮಾಡಿರುವ ಮೊತ್ತವೆಷ್ಟು,

ಆ) ಸರ್ಕಾರ ಈರುಳ್ಳಿಯನ್ನು ಖರೀದಿ ಮಾಡಿರುವುದೆಷ್ಟು,

ಇ) ಈರುಳ್ಳಿ ಖರೀದಿಯಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಮಾನ್ಯ ಕೃಷಿ ಮಾರುಕಟ್ಟೆ ಸಚಿವರು)–

ಅ) ರೂ 4200 ಕೋಟಿಗಳು

ಆ) 14,32,078 ಕ್ವಿಂಟಾಲ್‌ಗಳು

ಇ) ಲಿಖಿತ ಮೂಲಕ ಬಂದಿರುವುದಿಲ್ಲ ಮಾಧ್ಯಮಗಳ ಮೂಲಕ ಬಂದಿದೆ

ಈ) ಶೀಘ್ರವಾಗಿ ತನಿಖೆ ನಡೆಸಲಾಗುವುದು

ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ ಇವತ್ತು ಅಲ್ಲಿ ಆಗಿರುವ ಅವ್ಯವಹಾರ ಬಹಳ ದೊಡ್ಡದು ಧಾರವಾಡ ಜಿಲ್ಲೆಯಲ್ಲಿ ಈ ಅವ್ಯವಹಾರ ನಡೆದಿದೆ ಇದರಲ್ಲಿ ಯಾರ್ಯಾರು ಅಧಿಕಾರಿಗಳು ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು 42 ಕೋಟಿ ರೂಪಾಯಿಗಳು ಉಳ್ಳಾಗಡ್ಡೆಗೆ ಬೆಂಬಲ ಬೆಲೆ ಕೊಟ್ಟಿದೆ ಎಂದು ಸರ್ಕಾರ ಏನು ಹೇಳುತ್ತಿದೆ, ಆ ಹಣ ರೈತರಿಗೆ ಮುಟ್ಟಿಲ್ಲ ಖರೀದಿ ಮಾಡತಕ್ಕಂತಹ ಸಂದರ್ಭದಲ್ಲಿ ಯಾವ ಅಧಿಕಾರಿಗಳು

ಇದರಲ್ಲಿ ಪಾಲುದಾರರಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಸರ್ಕಾರ ಯಾವುದೇ ಬೆಂಬಲ ಬೆಲೆ ಕೊಡಲಿ ಆ ಬೆಂಬಲ ಬೆಲೆ ನೇರವಾಗಿ ರೈತರಿಗೆ ಮುಟ್ಟತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು ಈಗಾಗಲೇ 250 ರೂಪಾಯಿಗಳು ಇರುವಂತಹ ಉಳ್ಳಾಗಡ್ಡೆಯನ್ನು 500 ರೂಪಾಯಿಗಳಿಗೆ ಖರೀದಿ ಮಾಡುವಂತಹ ಸಂದರ್ಭದಲ್ಲಿ ನಡುವೆ ಇರುವಂತಹ ಅಧಿಕಾರಿಗಳು ಮತ್ತು ಎ ಪಿ ಎಂ ಸಿ ಅಧಿಕಾರಿಗಳು ಖೊಟ್ಟಿ ಪಾಸ್‌ಗಳನ್ನು ತೆಗೆದುಕೊಂಡು ಬಂದು ಉಳ್ಳಾಗಡ್ಡೆಯನ್ನು ಖರೀದಿ ಮಾಡುವಂತಹ ಕೆಲಸವನ್ನು ಧಾರವಾಡದಲ್ಲಿ ಮಾಡಿದ್ದಾರೆ ಇವತ್ತು ಸರ್ಕಾರ ಏನು ಬೆಂಬಲ ಬೆಲೆಯನ್ನು ಕೊಡುತ್ತದೆ, ಅದು ರೈತರಿಗೆ ಮುಟ್ಟಿಲ್ಲ, ಅದರಲ್ಲಿ ಯಾರ್‍ಯಾರು ಪಾಲುದಾರರಾಗಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) ಮಾನ್ಯ ಶಾಸಕರು ಹೇಳಿದಂತೆ ಈಗಾಗಲೇ ಧಾರವಾಡ ಜಿಲ್ಲೆಯಲ್ಲಿ ಸುಮಾರು 42 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಅವರು ಕೇಳಿರುವಂತೆ ಅವ್ಯವಹಾರದ ಬಗ್ಗೆ ನಾನು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ ಆದಷ್ಟು ಬೇಗ ತನಿಖೆಗೆ ಒಳಪಡಿಸುತ್ತೇವೆ ಈ ವಿಷಯ ಮಾಧ್ಯಮಗಳ ಮೂಲಕ ನನ್ನ ಗಮನಕ್ಕೂ ಕೂಡ ಬಂದಿದೆ ಅದರ ಬಗ್ಗೆ ತನಿಖೆಯಾದ ತಕ್ಷಣ ಯಾರಿಗೆ ಏನು ಶಿಕ್ಷೆಯಾಗಬೇಕೋ ಅದನ್ನು ಮಾಡುತ್ತೇವೆ ಅವರಿಗೆ ಆದಷ್ಟು ಬೇಗ ಶಿಕ್ಷೆ ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ

ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ ಸಾರ್ವಜನಿಕರಿಂದ ಉಳ್ಳಾಗಡ್ಡೆಯನ್ನು ಕೊಳ್ಳುವಾಗ ಸರ್ಕಾರ ಮುಂದೆ ಬಂದು ಬೆಂಬಲ ಬೆಲೆಯನ್ನು ಕೊಟ್ಟಿದ್ದಾರೆ ಈ ಸಂದರ್ಭದಲ್ಲಿ ಅಧಿಕಾರಿಗಳು ರೈತರಿಗೆ ಏನು ಮೋಸವನ್ನು ಮಾಡಿದ್ದಾರೆ ಅಂತಹ ಅಧಿಕಾರಿಗಳ ಮೇಲೆ ತಕ್ಷಣ ಕ್ರಮವನ್ನು ಕೈಗೊಳ್ಳಬೇಕು ಆ ಬಗ್ಗೆ ತನಿಖೆಯನ್ನು ಮಾಡುವಂತಹ ಕೆಲಸವನ್ನು ಮಾಡಬೇಕು ಪತ್ರಿಕೆಗಳಲ್ಲಿ ಬಂದಿರುವಂತಹ ವಿಷಯ ಸತ್ಯವಾದ ವಿಷಯ ಬೇರೆ ತಾಲ್ಲೂಕುಗಳಿಂದ ಪಾಸ್‌ಗಳನ್ನು ತೆಗೆದುಕೊಂಡು ಬಂದು ಉಳ್ಳಾಗಡ್ಡೆಯನ್ನು ಖರೀದಿ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಯಾರ್‍ಯಾರು ಇದರಲ್ಲಿ ಪಾಲುದಾರರು

ಇದ್ದಾರೆ ಅವರ ಮೇಲೆ ತನಿಖೆ ಮಾಡಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಶರಣಬಸಪ್ಪ ದರ್ಶನಾಪುರ ಕ್ರಮ ತೆಗೆದುಕೊಳ್ಳುತ್ತೇನೆ

ಸಂತೆ ಮಾರುಕಟ್ಟೆ ನಿರ್ಮಾಣ

134 (1139) – ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) – ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ವಿಧಾನಸಭಾ ಕ್ಷೇತ್ರದಲ್ಲಿ ಸಂತೆ ಮಾರುಕಟ್ಟೆ ನಿರ್ಮಾಣಕ್ಕೆ ಕ್ರಮ ಕೈಗೊಂಡಿದೆಯೇ,

ಆ) ಈವರೆಗೆ ಎಷ್ಟು ಸಂತೆ ಮಾರುಕಟ್ಟೆಗಳನ್ನು ನಿರ್ಮಾಣ ಮಾಡಲಾಗಿದೆ, (ವಿವರ ನೀಡುವುದು),

ಇ) ಈಗಲಾದರೂ ಸಂತೆ ಮಾರುಕಟ್ಟೆ ನಿರ್ಮಾಣದಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೆ?

ಶ್ರೀ ಶರಣಬಸಪ್ಪ ದರ್ಶನಾಮರ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) 1 ನಬಾರ್ಡ್ ಧನ ಸಹಾಯದಡಿ ಆರ್ ಐ ಡಿ ಎಫ್–IX ರಲ್ಲಿ ಹೊರ್ತಿ ಗ್ರಾಮದಲ್ಲಿ ಗ್ರಾಮೀಣ ಸಂತೆಯನ್ನು ರೂ -11 21 ಲಕ್ಷ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದೆ

2 ನಬಾರ್ಡ್ ಧನ ಸಹಾಯದಡಿ ಆರ್ ಐ ಡಿ ಎಫ್–XIರಲ್ಲಿ ಕಲ್ಕೆರಿ, ಅಧರ್ಗಾ ಮತ್ತು ಟಂಬಾ ಗ್ರಾಮದಲ್ಲಿ ಸಂತೆ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರತಿಯೊಂದಕ್ಕೆ ರೂ 10 00 ಲಕ್ಷದಂತೆ ಒಟ್ಟು ರೂ 30 00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ

ಇ) 2006–07ನೇ ಸಾಲಿನಲ್ಲಿ ನಬಾರ್ಡ್ ಧನ ಸಹಾಯದಡಿ ಆರ್ ಐ ,ಡಿ ಎಫ್–XII ರಡಿಯಲ್ಲಿ ಹುಣಸಿಹಾಲ್ ಮತ್ತು ತೊಂಡಗಳಲ್ಲಿ ಸಂತೆಗಳನ್ನು ಪ್ರತಿ ಸಂತೆಗೆ ರೂ 10 00 ಲಕ್ಷಗಳಂತೆ ಒಟ್ಟಾರೆ ರೂ 20 00 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ನಬಾರ್ಡ್ ಸಂಸ್ಥೆಗೆ ಅನುಮೋದನೆಗೆ ಸಲ್ಲಿಸಲಾಗಿದೆ

7/4